ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಣ್ಣ ನೀರಾವರಿ ಲೆಕ್ಕ ಶೀರ್ಷಿಕೆ 4702 ಮತ್ತು 2702 ರಡಿಯಲ್ಲಿ ಬರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶಕ್ಕೆ ಒಳಪಡುವ ಸಣ್ಣ ನೀರಾವರಿ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ವರ್ಗಾಯಿಸುವ ಬಗ್ಗೆ.

---

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯುಡಿ 209 ಐಎಫ್‌ಪಿ 81 ದಿನಾಂಕ: 01-0[illegible]-1982.
2) ಸರ್ಕಾರದ ಆದೇಶ ಸಂಖ್ಯೆ: ಜಸಂಇ 3 ಕೆಎನ್‌ಎನ್ 99, ದಿನಾಂಕ: 29-[illegible]-1999.
3) ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ದಿನಾಂಕ: 17-4-2000ದ ಪತ್ರ ಸಂಖ್ಯೆ: ಕನೀನಿ ಲೆಪವಿ ಕಾಅಚ ಸಿಆರ್ 71 99-2000:105.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಂತೆ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಎಲ್ಲಾ ಸಣ್ಣ ನೀರಾವರಿ ಕಾಮಗಾರಿಗಳನ್ನು ಸಣ್ಣ ನೀರಾವರಿ ವಲಯಗಳ ವ್ಯಾಪ್ತಿಯಿಂದ (ಎಲ್ಲಾ ಹಂತಗಳಲ್ಲಿ) ಸಂಬಂಧಪಟ್ಟ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಲಯಗಳ ವ್ಯಾಪ್ತಿಗೆ (ಎಲ್ಲಾ ಹಂತಗಳಲ್ಲಿ) ವರ್ಗಾಯಿಸಲಾಗಿದ್ದು, ಈ ಕಾಮಗಾರಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಹಾಗೂ ನಿರ್ವಹಣೆಯನ್ನು ಸಂಬಂಧಪಟ್ಟ ಭಾರಿ ಮತ್ತು ಮಧ್ಯಮ ನೀರಾವರಿ ವಲಯಗಳಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಘಟಪ್ರಭಾ, ಮಲಪ್ರಭಾ ಮತ್ತು ತುಂಗಾ ಯೋಜನೆಗಳಡಿಯಲ್ಲಿ (ಭಾರಿ ನೀರಾವರಿ ಯೋಜನೆಗಳು) ಬರುವ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದ ರೂ. 700 ಕೋಟಿಗಳ ಆಸ್ತಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ವರ್ಗಾಯಿಸಲಾಗಿದ್ದು, ಈ ಆದೇಶದಲ್ಲಿ ಈ ಯೋಜನೆಯ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಯೋಜನಾ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ವರ್ಗಾಯಿಸಿಲ್ಲ.

ಮೇಲೆ (3)ರಲ್ಲಿ ನಮೂದಿಸಿರುವ ಪತ್ರದಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮಲಪ್ರಭಾ, ಘಟಪ್ರಭಾ ಭಾರಿ ನೀರಾವರಿ ಯೋಜನೆಗಳಡಿಯಲ್ಲಿ ಬರುವ 41 ಸಣ್ಣ ನೀರಾವರಿ ಯೋಜನೆ : ಕಾಮಗಾರಿಗಳನ್ನು 1980 ರಿಂದ 1989ರವರೆಗೆ ನೀರಾವರಿ (ಉತ್ತರ) ವಲಯ, ಬೆಳಗಾಂ ಅಡಿಯಲ್ಲಿ ನಿರ್ವಹಿಸಲು ವರ್ಗಾವಣೆ ಮಾಡಲಾಗಿದೆ. ಎಂದೂ ಈ ಯೋಜನೆ : ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯಾಪ್ತಿಗೆ ಒಳಪಡುವಂತೆ ವರ್ಗಾಯಿಸಿ ಸದರಿ ನಿಗಮದ ವತಿಯಿಂದ ಕಾರ್ಯನಿರ್ವಹಿಸುವ ಬಗ್ಗೆ ಆದೇಶ ಹೊರಡಿಸಲು ಕೋರಿದ್ದಾರೆ.

-125-



ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನೀಇ 32 ಕನೀನಿ 99, ಬೆಂಗಳೂರು, ದಿನಾಂಕ:13-07-2000.

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಮಲಪ್ರಭಾ ಮತ್ತು ಘಟಪ್ರಭಾ ಭಾರಿ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಅನುಬಂಧ-1ರಲ್ಲಿ ನಮೂದಿಸಿರುವ ಸಣ್ಣ ನೀರಾವರಿ ಯೋಜನೆ : ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯಾಪ್ತಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಲಾಗಿದೆ ಹಾಗೂ ಈ ಯೋಜನೆ : ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದಡಿಯಲ್ಲಿ ನಿರ್ವಹಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ: 21-03-2000ದ ಟಿಪ್ಪಣಿ ಸಂಖ್ಯೆ: ಲೋಇ 88 ಆಕೋ 1:2000ದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜೆ. ಸಿ. ಚಿದಂಬರಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂ)
ನೀರಾವರಿ ಇಲಾಖೆ (ಕೃಭಾಜನಿನಿ ವಿಶೇಷ ಕೋಶ).

ಇವರಿಗೆ:

1) ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2) ಮಹಾಲೇಖಪಾಲರು (ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ, ಬಂಗಳೂರು.
5) ಸರ್ಕಾರದ ಕಾರ್ಯದರ್ಶಿಗಳು, ನೀರಾವರಿ ಇಲಾಖೆ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
7) ಮುಖ್ಯ ಇಂಜಿನಿಯರ್, ನೀರಾವರಿ (ಉತ್ತರ) ವಲಯ, ಬೆಳಗಾವಿ.
8) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ.
9) ವಿಶೇಷಾಧಿಕಾರಿಗಳು (ಆರ್ಥಿಕ ಕೋಶ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10) ಗಾರ್ಡ್ ಫೈಲ್ : ಎಸ್. ಜಿ. ಫೈಲ್.
11) ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ನೀಇ 32 ಕನೀನಿ 99, ಬೆಂಗಳೂರು, ದಿನಾಂಕ: 13-07-2000

## ಅನುಬಂಧ - 1

| ಕ್ರಮ ಸಂಖ್ಯೆ | ಸಣ್ಣ ನೀರಾವರಿ ಯೋಜನೆಯ ಹೆಸರು | ಯೋಜನೆಯನ್ನು ನಿರ್ವಹಿಸುತ್ತಿರುವ ವಿಭಾಗ | ಕ್ಷೇತ್ರ (ಹೆಕ್ಟೇರ್‌ಗಳಲ್ಲಿ) | ಯಾವ ದಿನಾಂಕದಿಂದ ಭಾರೀ ನೀರಾವರಿ ವ್ಯಾಪ್ತಿಗೆ ವರ್ಗಾಯಿಸಲಾಗಿದೆ. |
|---|---|---|---|---|
| 1 | 2 | 3 | 4 | 5 |
| | | ಮಲಪ್ರಭಾ ಯೋಜನೆ | | |
| 1 | ಬನ್ನೂರು ಕೆರೆ | ಮ.ಎ.ದ.ಕಾ.ನಿ. ವಿಭಾಗ - 1, ರಾಮದುರ್ಗ | 89.48 | ಮೇ - 1987 |
| 2 | ಅರೆಬೆಂಚಿ ಕೆರೆ | ಮೇಲಿನಂತೆ | 50.17 | 24.8.1980 |
| 3 | ಕಲ್ಲಾಪುರ ಕೆರೆ | ಮೇಲಿನಂತೆ | 82.94 | 24.8.1980 |
| 4 | ಸುನ್ನಾಳ ಏತ ನೀರಾವರಿ | ಮೇಲಿನಂತೆ | 85.43 | ಆಗಸ್ಟ್ - 1980 |
| 5 | ಹಲಗತ್ತಿ ಏತ ನೀರಾವರಿ | ಮೇಲಿನಂತೆ | 36.43 | -ಸದರ- |
| 6 | ನರಸಾಪೂರ ಬಾಂಧಾರ | ಮೇಲಿನಂತೆ | 106.00 | 21.2.1989 |
| 7 | ಮದ್ದೂರು ಕೆರೆ | ಮ.ಎ.ದ.ಕಾ.ನಿ., ವಿಭಾಗ - 2, ನವಿಲುತೀರ್ಥ. | 23.93 | ಜುಲೈ - 1984 |
| 8 | ತಲ್ಲೂರು ಕೆರೆ | ಮೇಲಿನಂತೆ | 31.82 | -ಸದರ- |
| 9 | ಪಟ್ಟಿಹಾಳ ಕೆರೆ | ಮೇಲಿನಂತೆ | 28.46 | -ಸದರ- |
| 10 | ಹೊಸೂರು ಬಾಂಧಾರ | ಮೇಲಿನಂತೆ | 73.20 | -ಸದರ- |
| 11 | ಹೆಬ್ಬಳ್ಳಿ ಏತ ನೀರಾವರಿ | ಮ.ಎ.ದ.ಕಾ.ನಿ., ವಿಭಾಗ - 3, ಬಾದಾಮಿ | 80.00 | 21.4.1989 |
| 12 | ಜಕನೂರು ಏತ ನೀರಾವರಿ | ಮೇಲಿನಂತೆ | 100.00 | 21.4.1989 |
| 13 | ಚೋಳಚ ಗುಡ್ಡ ಏತ ನೀರಾವರಿ | ಮೇಲಿನಂತೆ | 128.00 | 21.4.1989 |
| 14 | ಚೋಳಚಗುಡ್ಡ ಬ್ಯಾರೇಜು | ಮೇಲಿನಂತೆ | 625.00 | --- |
| | | ಘಟಪ್ರಭಾ ಯೋಜನೆ. | | |
| 15 | ಕೊಣ್ಣೂರು ಏತ ನೀರಾವರಿ | ಘ.ಬ.ದ.ಕಾ.ನಿ.ವಿಭಾಗ - 2, ಹಿಡ್ಕಲ್ ಡ್ಯಾಮ್ | 455.00 | ಜುಲೈ- 1984 |
| 16 | ಸುಲ್ತಾನಪೂರ ಬ್ಯಾರೇಜು | ಮೇಲಿನಂತೆ | 174.00 | ಜೂನ್ 1989 |
| 17 | ಯರನಾಳ ಬ್ಯಾರೇಜು | ಮೇಲಿನಂತೆ | 226.00 | ಜೂನ್ 1989 |
| 18 | ಕೋಚರಿ ಬ್ಯಾರೇಜು | ಮೇಲಿನಂತೆ | 295.00 | -ಸದರ- |
| 19 | ಬಡಕುಂದ್ರಿ ಬ್ಯಾರೇಜು | ಮೇಲಿನಂತೆ | 80.00 | 1997-98 |
| 20 | ಹಲ್ಯಾಳ ಕೆರೆ (ಪಾರ್ಕ್) | ಘ.ಎ.ದ.ಕಾ.ನಿ.ವಿಭಾಗ - 1, ಘಟಪ್ರಭಾ | 522.00 | 1984-85 |
| 21 | ನಂದಿಕುರಳಿ ಕೆರೆ | ಮೇಲಿನಂತೆ | 80.00 | -ಸದರ- |

-123-

5

15-

| 1 | 2 | 3 | 4 | 5 |
|---|---|---|---|---|
| 22 | ಸಾಗರಾಳ ಕೆರೆ | ಮೇಲಿನಂತೆ | 60.00 | -ಸದರ |
| 23 | ಯಡ್ರಾವ ಕೆರೆ | ಮೇಲಿನಂತೆ | 24.00 | -ಸದರ- |
| 24 | ನಿಡಗುಂದಿ ಕೆರೆ | ಮೇಲಿನಂತೆ | 24.00 | -ಸದರ- |
| 25 | ಕಚರವಾಡಡಿ ಕೆರೆ | ಮೇಲಿನಂತೆ | 32.00 | -ಸದರ- |
| 26 | ಕಾಡಾಪೂರ ಕೆರೆ | ಮೇಲಿನಂತೆ | 89.00 | -ಸದರ- |
| 27 | ಮರಡಿನಾಲಾ ಕೆರೆ | ಮೇಲಿನಂತೆ | --- | -ಸದರ- |
| 28 | ಬನಹಟ್ಟಿ ಕೆರೆ | ಘ. ಎ. ದ. ಕಾ. ನಿ. ವಿಭಾಗ - 2, ಜಮಖಂಡಿ | 112.00 | 1984--85 |
| 29 | ಶಿರಗುಪ್ಪಿ ಏತ ನೀರಾವರಿ | ಮೇಲಿನಂತೆ | 72.66 | -ಸದರ- |
| 30 | ಕಲ್ಲೊಳ್ಳಿ ಏತ ನೀರಾವರಿ | ಮೇಲಿನಂತೆ | 72.90 | -ಸದರ- |
| 31 | ಕುಂಚನೂರು ಏತ ನೀರಾವರಿ | ಮೇಲಿನಂತೆ | 47.26 | -ಸದರ- |
| 32 | ರಬಕವಿ ಬ್ಯಾರೇಜು | ಮೇಲಿನಂತೆ | 3744.00 | -ಸದರ- |
| 33 | ಸೊನ್ನ ಏತ ನೀರಾವರಿ ಯೋಜನೆ | ಘ. ಎ. ದ. ಕಾ. ನಿ. ವಿಭಾಗ - 3, ಬೀಳಗಿ | 264.00 | 1984-85 |
| 34 | ಕೋರ್ತಿ ಏತ ನೀರಾವರಿ ಯೋಜನೆ | ಮೇಲಿನಂತೆ | 188.00 | -ಸದರ- |
| 35 | ರೊಳ್ಳಿ ಏತ ನೀರಾವರಿ ಯೋಜನೆ | ಮೇಲಿನಂತೆ | 72.00 | -ಸದರ- |
| 36 | ಚಿಲವತ್ತಿ ಏತ ನೀರಾವರಿ ಯೋಜನೆ | ಮೇಲಿನಂತೆ | 270.00 | -ಸದರ- |
| 37 | ಅನಗವಾಡಿ ಏತ ನೀರಾವರಿ ಯೋಜನೆ | ಮೇಲಿನಂತೆ | 123.00 | -ಸದರ- |
| 38 | ಬಾದರ ದಿನ್ನಿ ಏತ ನೀರಾವರಿ | ಮೇಲಿನಂತೆ | 210.00 | -ಸದರ- |
| 39 | ಚೋಕಾನಟ್ಟಿ ಬ್ಯಾರೇಜು | ಮೇಲಿನಂತೆ | 670.00 | -ಸದರ- |
| 40 | ಗಲಿಗಲಿ ಬ್ಯಾರೇಜು | ಮೇಲಿನಂತೆ | 3135.00 | -ಸದರ- |
| 41 | ಕೋಲ್ಹಾರ ಬ್ಯಾರೇಜು | ಮೇಲಿನಂತೆ | 4087.00 | -ಸದರ- |

[signature] 13/7/2011

(ಜೆ. ಸಿ. ಚಿದಂಬರಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂ)
ನೀರಾವರಿ ಇಲಾಖೆ (ಕೃಭಾಜನಿನಿ ವಿಶೇಷ ಕೋಶ)